## 1. ಬುದ್ಧನ ಸಲಹೆ

- ಡಾ. ನಿರುಪಮಾ.

### ಕವಿ ಕಾವ್ಯ ಪರಿಚಯ :

ಕನ್ನಡ ಸಾಹಿತ್ಯ ಲೋಕದಲ್ಲಿ ಗುರುತಿಸಬಹುದಾದ ಮಹಿಳಾ ಲೇಖಕಿಯವರಲ್ಲಿ ಡಾ|| ನಿರುಪಮಾರವರು ಒಬ್ಬರಾಗಿದ್ದಾರೆ. ಇವರು ಜನಿಸಿದ್ದು 1933ರಂದು ತುಮಕೂರು ಜಿಲ್ಲೆಯ 'ಹೊಳವನಹಳ್ಳಿ'ಯಲ್ಲಿ, ಶ್ರೀಮತಿ ನಿರುಪಮಾರವರು ಬಹುಭಾಷೆ ತಿಳಿದವರಾಗಿದ್ದು ಕನ್ನಡ, ತೆಲುಗು, ಸಂಸ್ಕೃತ, ಇಂಗ್ಲೀಷ್, ಹಿಂದಿ, ಬಂಗಾಲಿ ಭಾಷೆಯನ್ನು ಬಲ್ಲವರಾಗಿದ್ದಾರೆ. ಜೊತೆಗೆ ವಿವಿಧ ಭಾಷೆಗಳಲ್ಲಿಯ ಉತ್ತಮ ಕೃತಿಗಳನ್ನು ಕನ್ನಡಕ್ಕೆ ತಂದಿದ್ದಾರೆ. 'ಅಮೃತಕಲಶ', 'ಪರಿತ್ಯಕ್ತ', 'ಭುವನವಿಜಯ' ಎಂಬ ಪ್ರಮುಖ ಕಾದಂಬರಿಗಳು 'ಭಾರತೀಯ ನಾರಿ ನಡೆದು ಬಂದ ದಾರಿ'. 'ಭಾವಮುಖಿ' ಎಂಬ ಸಣ್ಣ ಕತೆಗಳು 'ರಣಹದ್ದು', 'ಅಧಿಕಾರಿಗಳ ಅವಾಂತ್ರಗಳೆಂಬ' ನಾಟಕಗಳು. ಮಕ್ಕಳ ಸಾಹಿತ್ಯ-25 ಎಂಬ ಕೃತಿಗಳು ಹಾಗೂ ಕರ್ನಾಟಕ ಕವಯಿತ್ರಿಗಳು ಎಂಬ ಸಂಪಾದಿತ ಬರಹಗಳನ್ನು ಬರೆದಿದ್ದಾರೆ. ಡಾ|| ನಿರುಪಮಾರವರ ಸಾಹಿತ್ಯ ಕೃಷಿಯನ್ನು ಮನ್ನಿಸಿ ಹುಡುಕಿಕೊಂಡು ಬಂದ ಪ್ರಶಸ್ತಿಗಳೆಂದರೆ ಯುನಿಸೆಫ್ ಮಕ್ಕಳ ಸಾಹಿತ್ಯ ಶಾಶ್ವತಿ ಸದೋದಿತಾ ಪ್ರಶಸ್ತಿ...ಆರ್ಯಭಟ ಪ್ರಶಸ್ತಿ, ಅನುಮಪಾ ಪ್ರಶಸ್ತಿ, ಸಾಹಿತ್ಯ ಶಿರೋಮಣಿ ಪ್ರಶಸ್ತಿ. ಅತ್ತಿಮಬ್ಬೆ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.

ಪ್ರಸ್ತುತ ಗದ್ಯವನ್ನು ಇವರ **'ಶತಮಾನದ ಮಕ್ಕಳ ಸಾಹಿತ್ಯ**" ಪುಸ್ತಕದಿಂದ ಆರಿಸಿಕೊಳ್ಳಲಾಗಿದೆ.

### ಪದಗಳ ಅರ್ಥ ಬರೆಯಿರಿ

ಸುಭಿಕ್ಷೆ - ಒಳ್ಳೆಯಕಾಲ, ಸಮೃದ್ಧಿ ದುರಾಸೆ - ಅತಿಆಸೆ, ಕೆಟ್ಟ ಬಯಕೆ

ಸಲಹೆ - ಬುದ್ಧಿವಾದ, ಮಾರ್ಗದರ್ಶನ

ನೆರೆಹೊರೆ - ಸುತ್ತಮುತ್ತ

ಅಮೂಲ್ಯ - ಬೆಲೆಕಟ್ಟಲಾಗದ

ವರ ಅನುಗ್ರಹ, ಶ್ರೇಷ್ಠ

ತೆಪ್ಪಗೆ - ಸುಮ್ಮನೆ, ಮಾತಿಲ್ಲದೆ

ಸ್ವಾರ್ಥ - ಸ್ವಹಿತ, ತನಗಾಗಿ

ಉತ್ಕಟ - ಅಧಿಕ, ಪ್ರಬಲವಾದ

ವಿಕ್ಷಮಿಸು - ನಂಜಾಗು, ವಿಕೋಪಕ್ಕೆ ತಿರುಗು

ಈರ್ಷ್ಯ - ಅಸೂಯೆ, ಹೊಟ್ಟೆಕಿಚ್ಚು ದ್ವೇಷ - ಹಗೆತನ, ವೈರತ್ವ

ಅಸೂಯೆ - ಹೊಟ್ಟೆಕಿಚ್ಚು

ಇ. ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.

1. ಸಿದ್ಧಾರ್ಥನ ತಂದೆಯ ಹೆಸರು

2. ವತ್ಸ ಮತ್ತು ಮಗಧ ರಾಜ್ಯಗಳ ನಡುವೆ ಹರಿಯುವ ನದಿ

3. ವತ್ಸ ಮತ್ತು ಮಗಧ ರಾಜ್ಯಗಳ ನಡುವೆ ಶಾಂತಿ ನೆಲೆಸುವಂತೆ ಮಾಡಿದವರು

4. 'ಬುದ್ಧನ ಸಲಹೆ' ಪಾಠದ ಆಕರ ಕೃತಿ.

**ಉತ್ತರಗಳು :1) ಶುದ್ಧೋಧನ 2) ಗಂಗಾನದಿ 3) ಭಗವಾನ್ ಬುದ್ಧ**

**4) ಶತಮಾನದ ಮಕ್ಕಳ ಸಾಹಿತ್ಯ**

**ಆ) ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ:**

**1) ಗಂಗಾನದಿ ಯಾವ ಸಮುದ್ರವನ್ನು ಸೇರುತ್ತದೆ?**

ಉತ್ತರ : ಗಂಗಾನದಿ ಹೇಮಕೂಟ ಪರ್ವತದಲ್ಲಿ ಹುಟ್ಟಿ ಬಂಗಾಳ ಸಮುದ್ರವನ್ನು ಸೇರುತ್ತದೆ.

**2. ಬುದ್ಧನ ಪ್ರಕಾರ ನದಿ ನೀರಿಗಿಂತ ಹೆಚ್ಚು ಬೆಲೆಯುಳ್ಳದ್ದು ಯಾವುದು?**

ಉತ್ತರ : ಬುದ್ಧನ ಪ್ರಕಾರ ನದಿ ನೀರಿಗಿಂತ ಹೆಚ್ಚು ಬೆಲೆಯುಳ್ಳದ್ದು ಶಾಂತಿ. ಏಕೆಂದರೆ ಮನುಷ್ಯನು ಸುಖವಾಗಿ ಜೀವಿಸಲು ನೀರು, ಗಾಳಿ, ಆಹಾರ ಮುಖ್ಯವಾದಂತೆ ಶಾಂತಿಯೂ ಅಷ್ಟೇ ಮುಖ್ಯವಾಗಿದೆ.

**3. ಬುದ್ಧ ದೇವನು ಹೇಳುವಂತೆ ಜೀವನದಲ್ಲಿ ಸುಖ ಶಾಂತಿ ಸಿಗಬೇಕಾದರೆ ಏನು ಮಾಡಬೇಕು?**

ಉತ್ತರ : ಬುದ್ಧ ದೇವನು ಹೇಳುವಂತೆ ಜೀವನದಲ್ಲಿ ಸುಖ, ಶಾಂತಿ ಸಿಗಬೇಕಾದರೆ ಮಾನವರು ಪರಸ್ಪರ ಹಂಚಿಕೊಳ್ಳುವ, ಗುಣ ಹೊಂದಬೇಕು.

**4. ವತ್ಸ ಮತ್ತು ಮಗಧ ರಾಜ್ಯದವರು ಯುದ್ಧವನ್ನು ಏಕೆ ನಿಲ್ಲಿಸಿದರು?**

ಉತ್ತರ : ಬುದ್ಧದೇವನು ಬೋಧಿಸಿದ ಶಾಂತಿಯ ಮಹತ್ವ ಅರಿತು, ವತ್ಸ ಮತ್ತು ಮಗಧ ರಾಜ್ಯದವರು ಯುದ್ಧವನ್ನು ನಿಲ್ಲಿಸಿದರು.

**ಇ) ಕೆಳಗಿನ ಪ್ರಶ್ನೆಗಳಿಗೆ ಮೂರು-ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ:**

**1. ವತ್ಸ ಮತ್ತು ಮಗಧ ರಾಜ್ಯದ ಜನರು ಗಂಗಾ ನದಿಯನ್ನು ತಾಯಿಯಂತೆ ಏಕೆ ಪೂಜಿಸುತ್ತಿದ್ದರು?**

ಉತ್ತರ : ವತ್ಸ ಮತ್ತು ಮಗಧ ರಾಜ್ಯದ ನಡುವೆ ಗಂಗಾ ನದಿ ಹರಿಯುತ್ತದೆ. ಈ ನದಿಯ ನೀರಿನಿಂದ ಎರಡೂ ರಾಜ್ಯಗಳ ನೆಲ ಸಸ್ಯ ಶ್ಯಾಮಲವಾಗಿತ್ತು. ಎತ್ತ ನೋಡಿದರೂ ಹಸಿರು ತುಂಬಿ ಬೆಳೆ ಬೆಳೆದು ಸುಭಿಕ್ಷದಿಂದ ಜನರು ಸುಖವಾಗಿದ್ದ, ಕಾರಣ ಗಂಗಾ ನದಿಯನ್ನು ತಾಯಿಯಂತೆ ಎರಡೂ ರಾಜ್ಯದ ಜನರು ಪೂಜಿಸುತ್ತಿದ್ದರು.

**2. ವತ್ಸ ಮತ್ತು ಮಗಧ ರಾಜ್ಯಗಳ ನಡುವೆ ದ್ವೇಷ ಏಕೆ ಹೆಚ್ಚಾಯಿತು?**

ಉತ್ತರ : ಗಂಗಾನದಿಯ ಮೇಲೆ ತಮ್ಮ ಹಕ್ಕು ಸ್ಥಾಪಿಸುವ ಸಲುವಾಗಿ ವತ್ಸ ಮತ್ತು ಮಗಧ ರಾಜ್ಯಗಳ ಜನರಲ್ಲಿ ಸ್ವಾರ್ಥ ಆವರಿಸಿತು. ಈ ಕಾರಣದಿಂದಾಗಿ ಎರಡೂ ರಾಜ್ಯಗಳ ನಡುವೆ ದ್ವೇಷ ಹೆಚ್ಚಾಯಿತು.

**3. ಬುದ್ಧನು ಹೇಳುವಂತೆ ದ್ವೇಷ ದುಃಖವನ್ನು ಹೇಗೆ ಹೆಚ್ಚಿಸುತ್ತದೆ?**

ಉತ್ತರ : ಬುದ್ಧನು ಹೇಳುವಂತೆ ದ್ವೇಷದಿಂದ ದ್ವೇಷವನ್ನು ಜಯಿಸಲು ಹೋದರೆ ಕೊನೆಗೆ ಉಳಿಯುವುದು ಈರ್ಷೆಯೇ. ಇದರಿಂದ ಜೀವಿಗಳಿಗೆ ದುಃಖವೇ ಹೆಚ್ಚಾಗುತ್ತದೆ ಹೊರತು ಸುಖವಲ್ಲ ಎಂದು ಬುದ್ಧ ತಿಳಿಸಿದ್ದಾರೆ.

**4. ಬುದ್ಧ ದೇವನು ವತ್ಸ ಮತ್ತು ಮಗಧ ರಾಜ್ಯಗಳ ನಡುವಿನ ಯುದ್ಧವನ್ನು ಏಕೆ ತಪ್ಪಿಸಿದನು?**

ಉತ್ತರ : ಸರ್ವರಿಗೂ ಮೀಸಲಾಗಿರುವ ನೆಲ, ಜಲಗಳನ್ನು ಹಂಚಿಕೊಳ್ಳುವಾಗ ಮಾನವರು ವಿವೇಕವನ್ನು ಕಳೆದುಕೊಂಡು ಯುದ್ಧಕ್ಕೆ ಸನ್ನದ್ಧನಾಗುತ್ತಾರೆ. ಈ ಯುದ್ಧಗಳಿಂದ ಅಪಾರ ಸಾವು ನೋವು ಉಂಟಾಗಿ ಬದುಕು ನರಕವಾಗಿ ಬಿಡುತ್ತದೆ ಎಂಬ ಸತ್ಯವನ್ನು ಮರೆತುಬಿಡುತ್ತಾರೆ. ಅದಕ್ಕಾಗಿ ಬದುಕಲು ಗಾಳಿ, ನೀರು, ಆಹಾರದಂತೆ ಸುಖ ಶಾಂತಿ, ನೆಮ್ಮದಿ ಅಗತ್ಯವಾಗಿ ಬೇಕು ಎಂದು ಅರಿತ ಬುದ್ಧದೇವನು ಯುದ್ಧವನ್ನು ತಪ್ಪಿಸಿದನು.

## ಈ) ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ:

**1. ಮತ್ಸ ಮತ್ತು ಮಗಧ ರಾಜ್ಯಗಳು ಯುದ್ಧ ಮರೆತು ಶಾಂತಿಯಿಂದ ನೆಲೆಸಿದುದು ಹೇಗೆ?**

ಉತ್ತರ : ವತ್ಸ ಮತ್ತು ಮಗಧ ರಾಜ್ಯಗಳು ಗಂಗಾನದಿಯ ಮೇಲೆ ತಮ್ಮ ಹಕ್ಕು ಸ್ಥಾಪಿಸುವ ಸಲುವಾಗಿ ದ್ವೇಷ, ಅಸೂಯೆಗಳಿಂದ ಪರಸ್ಪರ ಹೋರಾಟಕ್ಕೆ ಸಿದ್ಧವಾದರು. ಆ ಸಮಯದಲ್ಲಿ ಬುದ್ಧದೇವನು ಆಗಮಿಸಿ ಇಬ್ಬರೂ ರಾಜ ಮಂತ್ರಿಗಳಿಗೆ ನದಿಯ ನೀರು, ಮಾನವ ರಕ್ತಗಳಲ್ಲಿ ಯಾವುದಕ್ಕೆ ಹೆಚ್ಚು ಬೆಲೆ ಕೊಡುತ್ತೀರಿ? ಎಂದು ಕೇಳಿದನು. ಆಗ ಮಂತ್ರಿಗಳು ರಕ್ತವೆಂಬ ಉತ್ತರ ಕೊಟ್ಟರು. ಹಾಗಾದರೆ ನದಿ ನೀರಿಗಾಗಿ ಅಮೂಲ್ಯವಾದ ರಕ್ತ ಹರಿಸಲು ಏಕೆ ಸಿದ್ಧರಾಗಿದ್ದೀರಿ? ಜೀವಿಸಬೇಕೆಂದ ಮೇಲೆ ಸಾಯಲೇಕೆ ಯುದ್ಧವನ್ನು ಆರಿಸಿಕೊಂಡಿದ್ದೀರಿ? ಇವೆಲ್ಲವನ್ನು ಬಿಟ್ಟು ಶಾಂತಿ ಬೆಳೆಸಿಕೊಳ್ಳಿ. ವಿವೇಕದಿಂದ ವರ್ತಿಸಿರಿ, ಪ್ರಕೃತಿ ಸಂಪತ್ತನ್ನು ಹಂಚಿಕೊಂಡಾಗ ಎಲ್ಲರಿಗೂ ಸುಖ, ಶಾಂತಿ ಸಿಗುತ್ತದೆ ಎಂದು ಬುದ್ಧದೇವ ತಿಳಿಸಿದಾಗ ವತ್ಸ ಮತ್ತು ಮಗಧ ರಾಜ್ಯಗಳು ಯುದ್ಧ ಮರೆತು ಶಾಂತಿಯಿಂದ ನೆಲೆಸಿದರು.

**2. ಬದುಕಿನಲ್ಲಿ ಸುಖ, ಶಾಂತಿ, ನೆಮ್ಮದಿಯನ್ನು ಕೊಂಡುಕೊಳ್ಳುವುದು ಹೇಗೆ? ಚರ್ಚಿಸಿ**

ಉತ್ತರ : ಬದುಕಿನಲ್ಲಿ ಸುಖ, ಶಾಂತಿ, ನೆಮ್ಮದಿಗಳನ್ನು ಕೊಂಡುಕೊಳ್ಳಲು ಮಾನವರು ಪ್ರಕೃತಿ ಕೊಡಮಾಡಿದ ಪ್ರಾಕೃತಿಕ ಸಂಪತ್ತನ್ನು ಬಳಸಿಕೊಂಡು ಸಮೃದ್ಧಿಯ ಜೀವನ ನಡೆಸಬೇಕು. ಇಲ್ಲದಿದ್ದರೆ ಸ್ವಾರ್ಥ, ದ್ವೇಷ, ತುಂಬಿದ ದುರಾಸೆ ಬದುಕು ನಮ್ಮನ್ನು ನಾಶಮಾಡುತ್ತದೆ: ಎಲ್ಲ ಕಾಲದಲ್ಲಿಯೂ ಪರಿಸ್ಥಿತಿಯ ಅರಿತು ಬದುಕಬೇಕು. ಒಳಿತು-ಕೆಡಕುಗಳ ಬಗ್ಗೆ ತಾಳ್ಮೆಯಿಂದ ತೀರ್ಮಾನ ಕೈಗೊಳ್ಳಬೇಕು. ಪರಸ್ಪರ ಹಂಚಿಕೊಂಡು ತಿನ್ನುವ, ಇನ್ನೊಬ್ಬರ ಕಷ್ಟದಲ್ಲಿ ಭಾಗಿಯಾಗುವ, ವಿವೇಕದಿಂದ ವರ್ತಿಸುವ, ಸೌಹಾರ್ದಯುತವಾಗಿ ಬಾಳುವ, ಶಾಂತಿಯ ನೆಲೆಸುವಂತೆ ಮಾಡುವುದರಿಂದ ಬದುಕಿನಲ್ಲಿ ಸುಖ, ಶಾಂತಿ, ನೆಮ್ಮದಿಗಳನ್ನು ಕೊಂಡುಕೊಳ್ಳಬಹುದು.

## ಉ) ಸಂದರ್ಭದೊಡನೆ ವಿವರಿಸಿರಿ:

**1. 'ಮನುಷ್ಯನ ರಕ್ತ ನದಿ ನೀರಿಗಿಂತಲೂ ಬೆಲೆಯುಳ್ಳದ್ದು'**

ಪ್ರಸ್ತುತ ಈ ಮೇಲಿನ ವಾಕ್ಯವನ್ನು **ಡಾ. ನಿರುಪಮಾ** ಅವರು ಬರೆದಿರುವ **ಬುದ್ಧನ ಸಲಹೆ** ಎಂಬ ಗದ್ಯಪಾಠವನ್ನು **ಶತಮಾನದ ಮಕ್ಕಳ ಸಾಹಿತ್ಯ** ಎಂಬ ಕೃತಿಯಿಂದ ಆಯ್ದುಕೊಳ್ಳಲಾಗಿದೆ.

ಈ ಮೇಲಿನ ಮಾತನ್ನು ವತ್ಸ ಮತ್ತು ಮಗಧ ರಾಜ್ಯದವರು ಬುದ್ಧದೇವನಿಗೆ ಹೇಳಿದ ಮಾತಾಗಿದೆ.

**ಸಂದರ್ಭ** : ಎರಡು ರಾಜ್ಯದ ಜನರು ನದಿನೀರಿಗಾಗಿ ಯುದ್ಧಕ್ಕೆ ಸಿದ್ಧವಾದಾಗ ಬುದ್ಧನು 'ನದಿಯ ನೀರು ಮತ್ತು ಮಾನವ ರಕ್ತ ಇವೆರೆಡರಲ್ಲಿ ಯಾವುದಕ್ಕೆ ಹೆಚ್ಚು ಬೆಲೆಯಿದೆ' ಎಂದು ಪ್ರಶ್ನಿಸಿದಾಗ ಎರಡು ರಾಜ್ಯದ ಜನರು 'ಮನುಷ್ಯನ ರಕ್ತ ನದಿ ನೀರಿಗಿಂತಲೂ ಬೆಲೆಯುಳ್ಳದ್ದು' ಎಂದು ತಿಳಿಸುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.

**2. 'ನೀವು ಜೀವಿಸಬೇಕೆಂದಿದ್ದೀರಲ್ಲವೆ? ಮತ್ತೆ ಸಾಯಲೇಕೆ ಸಿದ್ಧರಾಗಿದ್ದೀರಿ?'**

ಪ್ರಸ್ತುತ ಈ ಮೇಲಿನ ವಾಕ್ಯವನ್ನು **ಡಾ. ನಿರುಪಮಾ** ಅವರು ಬರೆದಿರುವ **ಬುದ್ಧನ ಸಲಹೆ** ಎಂಬ ಗದ್ಯಪಾಠವನ್ನು **ಶತಮಾನದ ಮಕ್ಕಳ ಸಾಹಿತ್ಯ** ಎಂಬ ಕೃತಿಯಿಂದ ಆಯ್ದುಕೊಳ್ಳಲಾಗಿದೆ.

ಈ ಮೇಲಿನ ಮಾತನ್ನು ಬುದ್ಧದೇವನು ಎರಡು ರಾಜ್ಯದವರಿಗೆ ತಿಳಿಸಿದ ಮಾತಾಗಿದೆ.

**ಸಂದರ್ಭ :** ಪ್ರಕೃತಿಯು ಮಾನವರಿಗೆ ನೀಡಿರುವ ಎಲ್ಲ ವಸ್ತುಗಳನ್ನು ಹಂಚಿಕೊಂಡು ವಿವೇಕದಿಂದ ವರ್ತಿಸಿದಾಗ ಸುಖಶಾಂತಿ ಸಿಗುತ್ತದೆ. 'ಪ್ರಕೃತಿ ಜೀವಿಗಳಿಗೆ ವರವೇ ಹೊರತು ಶಾಪವಲ್ಲ' ಎಂದು ಬುದ್ಧನು ತಿಳಿಸುವ ಸಂದರ್ಭದಲ್ಲಿ ಈ ಮೇಲಿನ ಮಾತು ಬಂದಿದೆ.

### ಈ) ಕೆಳಗಿನ ಪದಗಳಿಗೆ ವಿರುದ್ಧಾರ್ಥಕ ಬರೆಯಿರಿ:

1. ಮೌಲ್ಯ X ಅಪಮೌಲ್ಯ
2. ಸುಖ X ದುಃಖ
3. ವರ X ಶಾಪ
4. ಸತ್ಯ X ಅಸತ್ಯ, ಮಿಥ್ಯ (ಸುಳ್ಳು)
5. ಪವಿತ್ರ X ಅಪವಿತ್ರ
6. ಸ್ವಾರ್ಥ X ನಿಸ್ವಾರ್ಥ

### ಉ) ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬರೆಯಿರಿ:

1. **ಹಿಂಜರಿಕೆ** - ಪೋಲಿಸರನ್ನು ನೋಡಿದಾಗ ಕಳ್ಳರಿಗೆ ಹಿಂಜರಿಕೆ ಉಂಟಾಯಿತು.
2. **ವಿವೇಕ** - ವಿವೇಕ ಹೊಂದಿದವನು ಉತ್ತಮ ಜೀವನ ನಡೆಸುತ್ತಾನೆ.
3. **ಸ್ವಾರ್ಥ** - ಕೌರವರು ಪಾಂಡವರ ಮೇಲೆ ಸ್ವಾರ್ಥ ಸಾಧಿಸಿದರು.
4. **ಸುಖಶಾಂತಿ** - ಹರಿಶ್ಚಂದ್ರನ ಕಾಲದಲ್ಲಿ ಪ್ರಜೆಗಳು ಸುಖಶಾಂತಿಯಿಂದ ಬದುಕುತ್ತಿದ್ದರು.
5. **ಸುಭಿಕ್ಷೆ** - ಅರಸರ ಆಳ್ವಿಕೆಯಲ್ಲಿ ಆರ್ಥಿಕ ಪರಿಸ್ಥಿತಿ ಸುಭಿಕ್ಷೆಯಾಗಿತ್ತು.
6. **ಸಸ್ಯ ಶ್ಯಾಮಲ** - ಮುಳ್ಳಯ್ಯನಗಿರಿ ಬೆಟ್ಟ ಸಸ್ಯಶ್ಯಾಮಲ ದಿಂದ ಕಂಗೊಳಿಸುತ್ತದೆ.

ವಿಷಯ ಶಿಕ್ಷಕರ ಸಹಿ ಪ್ರಾಂಶುಪಾಲರ ಸಹಿ